ಕರ್ನಾಟಕ ವಿಧಾನ ಪರಿಷತ್ತು

1] ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1218

2] ಸದಸ್ಯರ ಹೆಸರು : ಶ್ರೀ ಆಯನೂರು ಮಂಜುನಾಥ್ (ಪದವೀಧರ ಕ್ಷೇತ್ರ)

3] ಉತ್ತರಿಸುವ ದಿನಾಂಕ : 23.12.2021

4] ಉತ್ತರಿಸುವ ಸಚಿವರು : ಗೃಹ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಪೊಲೀಸ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಸರ್ಕಾರದ ಸುತ್ತೋಲೆ ಸಂಖ್ಯೆ : ಆ.ಇ.ಟಿ.ಪಿ/ಎಫ್.ಪಿ 2021, ದಿನಾಂಕ :03.08.2021 ಹಿಂದಿನ ಆರ್ಥಿಕ ವರ್ಷದ/ವರ್ಷಗಳ ವೇತನ ಬಾಕಿಯನ್ನು ಸೆಳೆಯಲು, ನಿರ್ದಿಷ್ಟ ಅನುಮೋದನೆಯನ್ನು ನೀಡಿ, ಬಾಕಿ ಇರುವ ವೇತನವನ್ನು ಪಾವತಿಸಲು ಸರ್ಕಾರದ ಮಂಜೂರಾತಿ ಆದೇಶವನ್ನು ಹೊರಡಿಸಲಾಗಿದೆಯೇ ;	ಪೊಲೀಸ್ ಇಲಾಖೆಯಲ್ಲಿ ಮುಂಬಡ್ತಿ ವೇತನ ಬಾಕಿ, ಕಾಲಬದ್ಧ ವೇತನ ಬಡ್ತಿ, ವಾರ್ಷಿಕ ವೇತನ ಬಡ್ತಿ ಮತ್ತು ಹೊಸದಾಗಿ ನೇಮಕಗೊಂಡಿರುವ ಸಿಬ್ಬಂದಿಗಳಿಗೆ ಕೆಜಿಐಡಿ ಸಂಖ್ಯೆ ಹಾಗೂ ಎನ್‌ಪಿಎಸ್ ಫ್ರಾನ್ ಖಾತೆ ಸಂಖ್ಯೆ ದೊರೆಯುವವರೆಗೂ ಹೆಚ್‌ಆರ್‌ಎಂಎಸ್ ತಂತ್ರಾಂಶದಲ್ಲಿ ವೇತನವನ್ನು ಸೆಳೆಯಲು ಸಾಧ್ಯವಾಗದ ಹಿನ್ನೆಲೆಯಲ್ಲಿ ಹಿಂದಿನ ಸಾಲಿನ ವೇತನ ಭತ್ಯೆ ಪಾವತಿಸಲು ಒಟ್ಟಾರೆ ರೂ.105.95 ಕೋಟಿಗಳ ವೇತನವನ್ನು ಮತ್ತು ಭತ್ಯೆಯನ್ನು ಪಾವತಿಸಲು ಆರ್ಥಿಕ ಇಲಾಖೆಯ ಪತ್ರ ಸಂಖ್ಯೆ : ಆಇ 451 ವೆಚ್ಚ 11/2021ಇ, ದಿನಾಂಕ: 16.12.2021ರಲ್ಲಿ ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಲಭ್ಯವಿರುವ ಅನುದಾನದಿಂದ ಸೆಳೆಯಲು ಅನುವು ಮಾಡುವಂತೆ ಸುತ್ತೋಲೆ ಸಂಖ್ಯೆ:ಆಇ 01 ಟಿಎಫ್‌ಪಿ 2021, ದಿನಾಂಕ:3-8-2021 ರಲ್ಲಿನ ಷರತ್ತನ್ನು ಸಡಿಲಿಸಿ ಬಾಕಿ ವೇತನವನ್ನು ಸೆಳೆಯಲು ಅವಕಾಶ ನೀಡುವಂತೆ ಖಜಾನೆ ಆಯುಕ್ತರು, ಖಜಾನೆ ಆಯುಕ್ತಾಲಯ ಇವರಿಗೆ ಈಗಾಗಲೇ ನಿರ್ದೇಶನ ನೀಡಲಾಗಿರುತ್ತದೆ. ಅದರಂತೆ ಬಾಕಿ ವೇತನವನ್ನು ಪಾವತಿಸಲು ರಾಜ್ಯ ಹುಜೂರ್ ಖಜಾನೆ ಮತ್ತು ಜಿಲ್ಲಾ ಖಜಾನಾಧಿಕಾರಿಗಳು ಕ್ರಮಕೈಗೊಳ್ಳುತ್ತಾರೆ.
ಅ)	ಹೊರಡಿಸಿದ್ದಲ್ಲಿ, ಆದೇಶದನ್ವಯ ಬಾಕಿಯನ್ನು ಪಾವತಿಸಲಾಗಿದೆಯೇ ; (ವಿವರ ನೀಡುವುದು)	
ಇ)	ಇಲ್ಲವಾದಲ್ಲಿ ಕಾರಣವೇನು ?	

ಸಂಖ್ಯೆ: ಹೆಚ್‌ಡಿ 120 ಇಎಫ್‌ಎಸ್ 2021

[ಆರಗ ಜ್ಞಾನೇಂದ್ರ]
ಗೃಹ ಸಚಿವರು